# ಧಾರಾವಾಹಿ ಲೇಖನ ~ ದಿವ್ಯಸ್ಮೃತಿಪ್ರಭ

# ಶ್ರೀಮಾತೆಯವರ ಮಧುರ ಸ್ಮೃತಿ

**ಸ್ವಾಮಿ ವಾಸುದೇವಾನಂದ**

ಅನುವಾದ: ಸ್ವಾಮಿ ಶಾಂತಿನಾಥಾನಂದ

(*ಹಿಂದಿನ ಸಂಚಿಕೆಯಿಂದ* )

ಒಂದು ದಿನ ದ್ವಿಜೇನ್ (ಸ್ವಾಮಿ ಗಂಗೇಶಾನಂದ) ಜೊತೆ ಸೇರಿಕೊಂಡು ನಾವೆಲ್ಲರೂ ಚಹಾ ಕುಡಿದ ನಂತರ, "ಹಸಿವಾಗುತ್ತಿದೆ, ಹಸಿವಾಗುತ್ತಿದೆ" ಎನ್ನುತ್ತಿದ್ದೆವು. ಏಕೆಂದರೆ ಬೆಳಿಗ್ಗೆ ಶ್ರೀರಾಮಕೃಷ್ಣರ ಪೂಜೆಯ ಪ್ರಸಾದ ಹಂಚುವುದು ನಿಧಾನವಾಗುತ್ತಿತ್ತು. ಗೋಲಾಪ್ ಮಾ ಹಂಚುತ್ತಿದ್ದಳು. ಅದು ತಡವಾಗುತ್ತಿತ್ತು. ನಾನು ಗಂಗಾಸ್ನಾನ ಮಾಡಿ ಬೆಳಗ್ಗೆ ೮.೩೦ ಕ್ಕೆ ಪೂಜೆಗೆ ಕುಳಿತುಕೊಳ್ಳುತ್ತಿದ್ದೆ. ಪೂಜೆ ಮುಗಿಯುವುದು ಸಾಮಾನ್ಯವಾಗಿ ೧೦.೩೦ ಆಗುತ್ತಿತ್ತು. ಪೂಜೆ, ನೈವೇದ್ಯಗಳಿಗೆ ಅಣಿಮಾಡಿ, ಗೋಲಾಪ್ ಮಾ ಗಂಗಾಸ್ನಾನ ಮಾಡಲು ಹೋಗಿದ್ದಳು. ಶ್ರೀಮಾತೆಯವರು ಠಾಕೂರರ ನೈವೇದ್ಯವನ್ನು ಎರಡು ಭಾಗ ಮಾಡಿ ಒಂದನ್ನು ಮೊದಲೇ ತೆಗೆದು ಠಾಕೂರರಿಗಾಗಿಟ್ಟು, ಉಳಿದ ಅರ್ಧವನ್ನು ನೈವೇದ್ಯ ಮಾಡಿ ಹುಡುಗರಿಗೆ ಕಳಿಸಿಕೊಟ್ಟರು. ಇದೆಲ್ಲವನ್ನೂ ಕೇಳಿ ಮಹಾಪುರುಷ ಮಹಾರಾಜರು (ಸ್ವಾಮಿ ಶಿವಾನಂದ) ಹೇಳಿದರು, **"ಎಲ್ಲರೂ ಹೀಗೆ ಮಾಡಲಾರರು, ಕೇವಲ ಶ್ರೀಮಾತೆ ಮಾತ್ರ ಹೀಗೆ ಮಾಡಬಲ್ಲರು."**

ಒಂದು ದಿನ ಪೂಜೆಗಾಗಿ ಶ್ರೀಗಂಧವನ್ನು ತೇಯುತ್ತಿದ್ದೆ. ಶ್ರೀಮಾತೆಯವರು ಉತ್ತರದ ಬಾಗಿಲಿನ ಕೊನೆಯಲ್ಲಿ, ಆಗ್ನೇಯ ಮೂಲೆಯ ಕಡೆ ಮುಖ ಮಾಡಿ, ಮಾಲೆ ಎಣಿಸುತ್ತ ಜಪ ಮಾಡುತ್ತ ಕುಳಿತಿದ್ದರು. ಅಲ್ಲಿ ಬೇರೆ ಯಾರೂ ಇಲ್ಲದ್ದನ್ನು ನೋಡಿ ನಾನು ಅವರಿಗೆ ಕೇಳಿದೆ, "ಅಮ್ಮ, ಆಗಾಗ ಮನಸ್ಸೇಕೆ ದುರ್ಬಲವಾಗುತ್ತದೆ?" ಇದನ್ನು ಕೇಳಿ ಶ್ರೀಮಾತೆಯವರು ಜಪಮಾಲೆಯನ್ನು ಕೆಳಗಿಟ್ಟು ಹೀಗೆ ಹೇಳಿದರು: "ಆ ಕಡೆ ಗಮನ ಹರಿಸಬೇಡ. ಠಾಕೂರರೊಬ್ಬರನ್ನು ಬಿಟ್ಟು ಬೇರೆ ಯಾರ ಮನಸ್ಸಿನಲ್ಲಿ ದುರ್ಬಲತೆ ಬರುವುದಿಲ್ಲ? ಮನಸ್ಸಿನಲ್ಲಿ ಎಂದೂ ದುರ್ಬಲತೆ ಹುಟ್ಟದಂತಹ ಮಹಾಪುರುಷನ ಜನ್ಮ ಇದುವರೆಗೂ ಆಗಿದೆಯೇನು? ತನ್ನನ್ನು ಸುಧಾರಿಸಿಕೊಳ್ಳಲು ಒಬ್ಬನು ಪ್ರಯತ್ನಪಟ್ಟರೆ, ತನ್ನ ಮನಸ್ಸಿನಲ್ಲಿ ದುರ್ಬಲತೆ ಹುಟ್ಟುತ್ತಿದೆ ಎಂದು ಅವನು ತಿಳಿದುಕೊಂಡರೆ, ಇದೇ ಒಂದು ದೊಡ್ಡ ಪಾಠವಾಗುವುದು. ಆಗ ಮಹಾಮಾಯೆ ಪ್ರಸನ್ನಳಾಗಿ, ಅವನಿಗೆ ದಾರಿ ಬಿಟ್ಟುಬಿಡುತ್ತಾಳೆ. ಕೆಲವೇ ದಿನಗಳ ಸಾಧನೆ ಮಾಡಿದ ಮನುಷ್ಯ, 'ನನಗೆಲ್ಲಾ ಸಿಕ್ಕಿಬಿಟ್ಟಿತು' ಎಂದು ಆಲೋಚಿಸುತ್ತಾನೆ. ಇನ್ನೂ ಮೇಲೆ ಏರುವ ಪ್ರಯತ್ನವನ್ನೇ ಕೈಬಿಡುತ್ತಾನೆ. ಆದರೆ, ಎಂಥ ವಿವೇಕಿಯ ಮನದಲ್ಲೂ ಆಗಾಗ್ಗೆ ದುರ್ಬಲತೆಯನ್ನು ಬರಿಸಿ, 'ಇನ್ನೂ ಸಾಧನೆ ಮುಗಿದಿಲ್ಲ; ನಾಲ್ಕೆಡೆಗಳಲ್ಲಿಯೂ ಭೂತಪ್ರೇತಗಳು (ಪ್ರಲೋಭನೆಗಳು) ಸೊಂಟಕಟ್ಟಿ ಕುಳಿತಿವೆ; ಸಮಯ ಸಿಕ್ಕಿದರೆ ಸಾಕು, ನೆಗೆದು ಕತ್ತು ಹಿಡಿದು ಸವಾರಿ ಮಾಡುತ್ತವೆ' ಎಂದು ಠಾಕೂರರೇ ಜ್ಞಾಪಕ ಮಾಡಿಕೊಡುತ್ತಾರೆ.



ಇದರಿಂದ ಏನಾಗುತ್ತದೆ ಗೊತ್ತೆ? ಅಹಂಕಾರ ನಾಶವಾಗುತ್ತದೆ. ಎಷ್ಟು ದಿನ ಜೀವಿಸಿರುತ್ತೀಯೋ, ಸಾವಧಾನದಿಂದ ಶ್ರೀರಾಮಕೃಷ್ಣರಲ್ಲಿ ಶರಣಾಗತನಾಗಿ ಬದುಕಿರು. ಅಹಂಕಾರ ಬಂದರೆ ಮನಸ್ಸಿನಲ್ಲಿ ಉಪದ್ರವವಾಗಿಬಿಡುತ್ತದೆ. ಕೊನೆಯವರೆಗೂ ಶರಣಾಗತಿಯ ಭಾವವನ್ನು ತಾಳಿ ಇರಲು ಪ್ರಯತ್ನಿಸಬೇಕು. ಠಾಕೂರರು ತಮ್ಮ ಶರೀರದಲ್ಲೂ ಕಾಮದ ಆವೇಗವನ್ನು ಬರಿಸಿಕೊಂಡು (ಎಲ್ಲವನ್ನೂ ಗೆದ್ದುಬಿಟ್ಟಿದ್ದೇನೆಂದು) ಒಬ್ಬ ಜೀವಿ ತಾನು ಅಹಂಕಾರಪಡಲು ಕಾರಣವೇ ಇಲ್ಲವೆಂದು ತೋರಿಸಿಕೊಟ್ಟಿದ್ದಾರೆ."

ಒಂದು ಮಧ್ಯಾಹ್ನ ನಾನು ಠಾಕೂರರನ್ನು ನಿದ್ರೆಯಿಂದ ಎಬ್ಬಿಸಿದೆ. ಶ್ರೀಮಾತೆಯವರು ಚಾಪೆಯ ಮೇಲೆ ಕುಳಿತಿದ್ದರು. ಯೋಗೇನ್ ಮಾ ನನ್ನನ್ನು ಕೇಳಿದಳು, "ಏನು, ಇಲ್ಲಿ ನಿನಗೆ ಹೇಗೆ ಅನ್ನಿಸುತ್ತೆ?" ನಾನು ಹೇಳಿದೆ, "ಇಲ್ಲಿ ಕೆಲಸ ಒಂದೇ ತರದ್ದು. ಇದರಿಂದಾಗಿ, ಶ್ರೀಮಾತೆ ಯಾವಾಗ ಇಲ್ಲಿ ಇರುವುದಿಲ್ಲವೋ

ಆಗ ಎಲ್ಲವೂ ಬಹುಶಃ ಶುಷ್ಕವಾಗಿಯೇ ಕಾಣುತ್ತದೆ. ಇಲ್ಲಿ ಶಾಸ್ತ್ರಗಳನ್ನು ಅಧ್ಯಯನ ಮಾಡಲೂ ಯಾರೂ ಇಲ್ಲ." ಶ್ರೀಮಾತೆ ಹೇಳಿದರು, "ಠಾಕೂರರ ಸೇವೆ ಏಕೆ ನೀರಸವಾಗಿ ತೋರಬೇಕು? ಬೇಜಾರು ಏಕಾಗುತ್ತದೆ ಎನ್ನುವುದನ್ನು ಮನಸ್ಸಿನಲ್ಲಿ ವಿಚಾರಮಾಡಿ ನೋಡಬೇಕು. ಮನುಷ್ಯನ ಮನಸ್ಸಿಗೆ ಒಂದೇ ವಾತಾವರಣದಲ್ಲಿರು ವುದು ಅಭ್ಯಾಸವಾಗಿಬಿಟ್ಟರೆ, ಆಗ ಬೇರೆ ಕಡೆಗೆ ಹೋದರೆ ಅಲ್ಲಿ ಚೆನ್ನಾಗಿದೆ ಅನ್ನಿಸುವುದಿಲ್ಲ. ದೇಹ, ಮನಸ್ಸು ಎಲ್ಲವೂ ಒಂದೇ ರೀತಿಯಲ್ಲೇ ಇರಲು ಬಯಸುತ್ತವೆ. ಆಗ ನಾವು ಠಾಕೂರರಲ್ಲಿ ಪ್ರಾರ್ಥಿಸಬೇಕು. ನೋಡುತ್ತಿರು, ಅವರು ಮನಸ್ಸನ್ನು ಹೇಗೆ ಆನಂದಕರವಾಗಿ ಮಾಡುತ್ತಾರೆ! ಸಾಧನೆಯ ಪ್ರಾರಂಭದ ಅವಸ್ಥೆ ಯಲ್ಲಿ ಹೆಚ್ಚಾಗಿ ಜ್ಞಾನದ ವಿಚಾರ ಮಾಡುವುದು ಒಳ್ಳೆಯದಲ್ಲ. ಇದ ರಿಂದ ಮನಸ್ಸು ಶುಷ್ಕವಾಗಿಬಿಡುತ್ತದೆ. ಠಾಕೂರರ ಲೀಲೆಯ ಬಗ್ಗೆ ಮಾತುಕತೆಯಾಡಿದರೆ, ನೀನೇ ಕಂಡುಕೊಳ್ಳುತ್ತೀಯೆ, ಮನಸ್ಸು ಹೇಗೆ ಸರಾಗವಾಗಿ ಉಚ್ಚಸ್ಥಿತಿಗೆ ಏರುತ್ತದೆ ಎಂದು. ಶರತ್ (ಸ್ವಾಮಿ ಶಾರದಾನಂದ) ಲೀಲಾಪ್ರಸಂಗವನ್ನು ಎಷ್ಟು ಸುಂದರವಾಗಿ ಬರೆದಿದ್ದಾನೆ! ಮಾಸ್ಟರ್ ಬರೆದಿರುವ 'ವಚನವೇದ' ಕೇಳಿದರೆ ಮನಸ್ಸು ಶಾಂತವಾಗಿಬಿಡುತ್ತದೆ. ಅಕ್ಷಯನ 'ಪೂಂಥಿ' ಯನ್ನು ಕೂಡಾ ದಿನವೂ ಸ್ವಲ್ಪ ಸ್ವಲ್ಪ ಓದು. ಸಮಯ ದೊರೆತರೆ ನಾನೂ ಕೂಡಾ ದಿನವೂ ಸ್ವಲ್ಪ ಸ್ವಲ್ಪ ಕೇಳುತ್ತೇನೆ."

ಒಂದು ದಿನ ಉದ್ಬೋಧನದಲ್ಲಿ ಪೂಜೆ ಮಾಡುತ್ತಿದ್ದಾಗ, ಬಾಣೇಶ್ವರ ಲಿಂಗಕ್ಕೆ ಸ್ನಾನ ಮಾಡಿಸುತ್ತಿದ್ದೆ. ಲಿಂಗ ಕೈಯಿಂದ ಜಾರಿ ಉರುಳಿಕೊಂಡು ಹೋಯಿತು. ಗಾಬರಿಯಿಂದ ನಾನು ಓಡಿಹೋಗಿ ಲಿಂಗವನ್ನು ಎತ್ತಿಕೊಂಡು, ಅದರ ಸ್ಥಾನದಲ್ಲಿ ಇಟ್ಟೆ. ಮರುದಿನ ಬೆಳಿಗ್ಗೆ ರಾಮಕೃಷ್ಣಪುರದಿಂದ ನೀರದ್ ಮಹಾರಾಜರ (ಸ್ವಾಮಿ ಅಂಬಿಕಾನಂದ) ತಾಯಿ ಬಂದು ಕೇಳಿದರು, "ಮಗು, ನೀನು ಸ್ನಾನ ಮಾಡಿಸುತ್ತಿದ್ದಾಗ ಮಹಾದೇವನನ್ನು ಬೀಳಿಸಿಬಿಟ್ಟೆಯಾ?" ನಾಚಿಕೆಗೊಂಡು ನಾನು ಕೇಳಿದೆ, "ಅಮ್ಮಾ, ನಿಮಗೆ ಇದು ಹೇಗೆ ತಿಳಿಯಿತು?" ಆಕೆ ಹೇಳಿದರು, "ನಿನ್ನೆ ನಾನು ಕನಸಿನಲ್ಲಿ ನೋಡಿದೆ, ಐದು ವರ್ಷದ ಬಹಳ ಸುಂದರ ಗೌರವರ್ಣದ ಹುಡುಗ, ದಿಗಂಬರ, ಅವನಿಗೆ ಚಿಕ್ಕ ಜಟೆಗಳು – ಅವನು ಕುಣಿಕುಣಿಯುತ್ತಾ ಬಂದು ನನಗೆ ಹೇಳಿದ, 'ನನ್ನನ್ನು ಬೀಳಿಸಿಬಿಟ್ಟ' ಎಂದು."

ಶ್ರೀಮಾತೆ ಹತ್ತಿರದಲ್ಲೇ ಕಾಲುಚಾಚಿ ಕುಳಿತುಕೊಂಡು ಯಾರ ಜೊತೆಗೋ ಮಾತನಾಡುತ್ತಿದ್ದರು. ಆದರೂ ಅವರು ಎಲ್ಲವನ್ನೂ ಕೇಳಿಸಿಕೊಂಡಿದ್ದರು. ಆ ಸಮಯದಲ್ಲಿ ನಾನು 'ಗುರುಕೃಪಾ ಹಿ ಕೇವಲಂ' ಎಂದು ನನಗೆ ನಾನೇ ಹೇಳಿಕೊಳ್ಳುತ್ತಿದ್ದೆ; ನನ್ನ ಎದೆ ಡಬಡಬ ಎಂದು ಹೊಡೆದುಕೊಳ್ಳುತ್ತಿರುವುದು ನನಗೇ ಕೇಳಿಸುತ್ತಿತ್ತು. ಶ್ರೀಮಾತೆ, ನೀರದ ಮಹಾರಾಜರ ತಾಯಿಯ ಕಡೆಗೆ ನೋಡಿ ಹೇಳಿದರು, "ಚಿಕ್ಕ ಮಕ್ಕಳು ಆಡುವಾಗ ಎಷ್ಟೋ ಸಲ ಹೀಗೆ ಬೀಳುತ್ತವೆ." ಮತ್ತೆ ನಗುತ್ತಾ ಬಾಣೇಶ್ವರ ಶಿವನ ಕಡೆ ನೋಡಿ ಹೇಳಿದರು, "ಮಗು, ನೀನು ಅಷ್ಟಮೂರ್ತಿಯಾಗಿ ವಿಶ್ವವನ್ನು ಆವರಿಸಿಕೊಂಡು ಇರುತ್ತೀಯೆ. ಹೀಗಿರುವಾಗ ಇಷ್ಟು ಚಿಕ್ಕ ಹುಡುಗ ನಿನ್ನನ್ನು ಹೇಗೆ ತಾನೇ ಹಿಡಿದುಕೊಂಡಿರಲು ಸಾಧ್ಯ?" ಮನಸ್ಸಿನಲ್ಲೇ ಭಾವಿಸಿಕೊಂಡೆ, **"ಶಿವರುಷ್ಟೇ ಗುರುಸ್ತ್ರಾತಾ ಗುರುರುಷ್ಟೇ ನ ಕಶ್ಚನ"** – ಶಿವನು ಕೋಪಗೊಂಡರೆ ಗುರುವು ಕಾಪಾಡುತ್ತಾನೆ. ಗುರು ಕೋಪಗೊಂಡರೆ ಯಾರೂ ಕಾಪಾಡಲಾರರು. ಯೋಗಿನ್ ಮಾ ಹೇಳಿದಳು: "ಇನ್ನು ಮೇಲಾದರೂ ಜಾಗರೂಕತೆಯಿಂದ ಇರು." ನನ್ನ ತಪ್ಪಿನ ಶಾಂತಿಗೋಸ್ಕರ ಆಕೆಯ ಕಡೆಯ ಬ್ರಾಹ್ಮಣರು ಬೃಂದಾವನದಲ್ಲಿ ದೇವರಿಗೆ ಚಾಮರಸೇವೆ ಮತ್ತು ಚಂಡೀಪಾಠ ಮಾಡುತ್ತಾರೆ ಎಂದು ನೀರದ್ ಮಹಾರಾಜರ ತಾಯಿ ನನಗೆ ಹೇಳಿದರು.

ಒಂದು ಸಲ ಉದ್ಬೋಧನದ ಕಟ್ಟಡದ ಕೆಳಗಡೆ ನಾವೆಲ್ಲ ಜೋರಾಗಿ ಗಲಾಟೆ ಮಾಡುತ್ತಿದ್ದೆವು. ಇದನ್ನು ನೋಡಿ ಗೋಲಾಪ್ ಮಾ ಶ್ರೀಮಾತೆಗೆ ಹೇಳಿದಳು, "ನಿಮ್ಮ ಹುಡು ಗರ ಮೇಲೆ ನಿಮಗೆ ಯಾವ ಹತೋಟಿಯೂ ಇಲ್ಲ. ಠಾಕೂರರು ಹುಡುಗರನ್ನು ಹೇಗೆ ನಿಯಂತ್ರಿಸಿಟ್ಟಿದ್ದರು. ಯಾರಿಗೂ ಸ್ವಲ್ಪ ಈ ಕಡೆ ಆ ಕಡೆ ನೋಡಲೂ ಅವಕಾಶವಿರಲಿಲ್ಲ." ಶ್ರೀಮಾತೆ ಹೇಳಿದರು, "ಏನು ಮಾಡಲಮ್ಮಾ, ನಾನು ಯಾರಲ್ಲೂ ಸ್ವಲ್ಪವೂ ದೋಷವನ್ನು ಕಾಣಲಾರೆ. ಇನ್ನು ಅವರನ್ನು ನಿಯಂತ್ರಣಕ್ಕೆ ಹೇಗೆ ತಾನೆ ತರಲಿ? ನಾನು ತಾಯಿಯಲ್ಲವೇನು, ನಾನು ಅವರನ್ನು ಹತೋಟಿಗೆ ಹೇಗೆ ತಾನೆ ತರಲಿ? ನಾನು ಗುಡಿಸಿ, ಸಾರಿಸಿ ಶುಭ್ರವಾಗಿ ಇಡುತ್ತೇನೆ. ಇವರೆಲ್ಲ ಠಾಕೂರರ ಮಕ್ಕಳು. ಇವರ ಮೇಲೆ ಅಧಿಕಾರ ಮಾಡಲಾದೀತೆ? ಮಾಡಿದರೆ ತಾನೇ ಏನು ಲಾಭ? ಅವರೇ ಎಲ್ಲಾ ಸರಿ ಮಾಡುತ್ತಾರೆ. ನಮ್ಮ ಠಾಕೂರರು ಪ್ರೇಮಮಯರು. ಅವರಲ್ಲಿ ಯಾವ ಘೋರವಾದ ಅಥವಾ ಅಸಹಜ ಭಾವಗಳಿಲ್ಲ. ಜನ ಮಾತನಾಡಿಕೊಳ್ಳುತ್ತಾರೆ, 'ಸರಿ! ಸರಿ! ಇದರ ಫಲವನ್ನು ಭಗವಂತನು ಕೊಡುತ್ತಾನೆ' ಎಂದು. ಆದರೆ ನಾನು ಠಾಕೂರರಲ್ಲಿ ಪ್ರಾರ್ಥಿಸುವುದೇನು ಗೊತ್ತೆ? 'ಠಾಕೂರ್, ಒಳ್ಳೆಯವರು–ಕೆಟ್ಟವರು ಎಲ್ಲರಿಗೂ ಮಂಗಳವನ್ನುಂಟುಮಾಡು' ಅಂತಲೇ. ಆ ಹುಡುಗರಿಗೆ ಹೇಳು ತ್ತೇನೆ, 'ಯಾರಲ್ಲೂ ಅಸೂಯೆ ಇಟ್ಟುಕೊಳ್ಳಬೇಡಿ. ಭಗವಂತ ನಲ್ಲಿಯೂ (ಬೇರೆಯವರ ವಿಷಯದಲ್ಲಿ) ನ್ಯಾಯ ಕೊಡು ಎಂದು ಹೇಳಬೇಡಿ; ಅದರ ಬದಲಾಗಿ ಅತ್ಯಂತ ದುಷ್ಟನಿಗೂ ಅತ್ಯಾಚಾರಿಗೂ ಮಂಗಳವಾಗಲಿ ಎಂದು ಪ್ರಾರ್ಥಿಸಿ.' ಭಗ ವಂತನ ನ್ಯಾಯ ತುಂಬ ಪ್ರಾಮಾಣಿಕವಾಗಿರುತ್ತದೆ. ಅದು ಸ್ವಲ್ಪ ಕೂಡಾ ಈ ಕಡೆ ಆ ಕಡೆಯಾಗಲು ಸಾಧ್ಯವಿಲ್ಲ. ಅವನ ದಯೆಗೆ ಯಾವ ಎಲ್ಲೆಯೂ ಇಲ್ಲ."

ಒಂದು ಸಲ ಕೆಲವರು ಒಬ್ಬ ವ್ಯಕ್ತಿಯ ವಿರುದ್ಧ ಸುಳ್ಳು ಪ್ರಚಾರ ಮಾಡುತ್ತಿದ್ದರು. ಇದನ್ನು ಕೇಳಿ ಶ್ರೀಮಾತೆಯವರು ರಾಸ್‌ಬಿಹಾರಿ ಮಹಾರಾಜ್‌ಗೆ ಹೇಳಿದರು, "ಕುಂಡದಿಂದ ನೀರನ್ನು ತೆಗೆದು ಅವರ ಮೇಲೆ ಪ್ರೋಕ್ಷಿಸಲು ಹೇಳು. ಇಲ್ಲದಿದ್ದರೆ ಅವರು ಬೆಂದು ಭಸ್ಮವಾಗುತ್ತಾರೆ."

*(ಮುಂದುವರಿಯುವುದು)*